BYJU'S
The Learning App

ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 45 ]
Total No. of Questions : 45 ]

**A**

# ವಿಷಯ : ಪ್ರಥಮ ಭಾಷೆ — ಕನ್ನಡ

# Subject : First Language — KANNADA

**(ಶಾಲಾ ಅಭ್ಯರ್ಥಿ & ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Fresh & Regular Repeater)**

ದಿನಾಂಕ : 28. 03. 2022 ] [ Date : 28. 03. 2022

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

### ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 45 ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.



https://byjus.com

BYJU'S The Learning App



I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ : $6 \times 1 = 6$

1. 'ಮಳೆಗಾಲ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

   (ಎ) ಲೋಪ ಸಂಧಿ

   (ಬಿ) ಆಗಮ ಸಂಧಿ

   (ಸಿ) ಆದೇಶ ಸಂಧಿ

   (ಡಿ) ಗುಣ ಸಂಧಿ

2. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಬಳಸುವ ಲೇಖನ ಚಿಹ್ನೆ

   (ಎ) ಉದ್ಧರಣ ಚಿಹ್ನೆ

   (ಬಿ) ವಾಕ್ಯವೇಷ್ಟನ ಚಿಹ್ನೆ

   (ಸಿ) ಆವರಣ ಚಿಹ್ನೆ

   (ಡಿ) ವಿವರಣಾತ್ಮಕ ಚಿಹ್ನೆ

https://byjus.com

BYJU'S The Learning App



3. 'ತಲೆನೋವು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

(ಎ) ತತ್ಪುರುಷ ಸಮಾಸ

(ಬಿ) ಕ್ರಿಯಾ ಸಮಾಸ

(ಸಿ) ಅಂಶಿ ಸಮಾಸ

(ಡಿ) ದ್ವಿಗು ಸಮಾಸ

4. 'ಸಾವಿತ್ರಿಯಲ್ಲಿ' ಈ ಪದದಲ್ಲಿರುವ ವಿಭಕ್ತಿಯ ಹೆಸರು

(ಎ) ದ್ವಿತೀಯಾ

(ಬಿ) ತೃತೀಯಾ

(ಸಿ) ಪಂಚಮೀ

(ಡಿ) ಸಪ್ತಮೀ

5. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ

(ಎ) ೦೨

(ಬಿ) ೦೫

(ಸಿ) ೦೬

(ಡಿ) ೦೭

https://byjus.com

BYJU'S The Learning App



6. ಸ್ವತಂತ್ರ ವಾಕ್ಯಗಳಾಗಿ ನಿಲ್ಲಬಲ್ಲ ಅನೇಕ ಉಪವಾಕ್ಯಗಳೊಡನೆ ಒಂದು ಪೂರ್ಣಾಭಿಪ್ರಾಯದ ವಾಕ್ಯವಾಗಿದ್ದರೆ ಅದು

(ಎ) ಸಾಮಾನ್ಯ ವಾಕ್ಯ

(ಬಿ) ಸಂಯೋಜಿತ ವಾಕ್ಯ

(ಸಿ) ಮಿಶ್ರವಾಕ್ಯ

(ಡಿ) ಪ್ರಶ್ನಾರ್ಥಕ ವಾಕ್ಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ :** **4 × 1 = 4**

7. ಮಕ್ಕಳುಮರಿ : ಜೋಡುನುಡಿ :: ಓಡಿಓಡಿ : .......................... .

8. ವರ್ಷ : ವರುಸ :: ಕಾರ್ಯ : .......................... .

9. ತಿನ್ನುತ್ತೇನೆ : ವರ್ತಮಾನಕಾಲ :: ತಿನ್ನುವೆನು : .......................... .

10. ಮಾಡಲಿ : ವಿಧ್ಯರ್ಥಕ :: ಮಾಡಿಯಾರು : .................... .

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7 × 1 = 7**

11. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು ?

https://byjus.com

12. ಮನೆಮಂಚಮ್ಮ ಯಾರು ?

13. ಶಾನುಭೋಗರ 'ಬ್ರಹ್ಮಾಸ್ತ್ರ' ಯಾವುದು ?

14. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?

15. ನದೀಜಲಗಳು ಏನಾಗಿವೆ ?

16. ಆಶ್ವಯುಜದ ಬತ್ತದ ಗದ್ದೆಯ ಬಣ್ಣ ಯಾವ ಹಸುರಿನಂತಿದೆ ?

17. ಪುಟ್ಟ ಪೋರಿಯ ಅಮ್ಮ ಎಲ್ಲಿ ಮಲಗಿದ್ದಾಳೆ ?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $10 \times 2 = 20$**

18. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ ?

19. ವಿ.ಕೃ. ಗೋಕಾಕ್ ಅವರು ಟೊಪ್ಪಿಗೆಯ ವಿಶೇಷತೆಯನ್ನು ಹೇಗೆ ದಾಖಲಿಸಿದ್ದಾರೆ ?

20. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು ?

21. ನೆಹರೂ ಅವರು ವಿಶ್ವೇಶ್ವರಯ್ಯ ಅವರ ಬಗ್ಗೆ ಹೇಳಿರುವ ಮಾತುಗಳಾವುವು ?

22. ಹಲಗಲಿಗೆ ದಂಡು ಬರಲು ಕಾರಣವೇನು ?

https://byjus.com

BYJU'S The Learning App



23. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ?

24. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು ?

25. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ ?

26. ಭಗತ್‌ಸಿಂಗ್ ಹಾಗೂ ಆತನ ಸಹಚರರು ಹೇಗೆ ಹುತಾತ್ಮರಾದರು ?

27. ಕೆಸರಿಗೂ ಕಮಲಕ್ಕೂ ಇರುವ ಸಂಬಂಧವನ್ನು ಜನಪದರು ಒಗಟಿನಲ್ಲಿ ಹೇಗೆ ವಿವರಿಸಿದ್ದಾರೆ ?

**V. ಕೆಳಗಿನ ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 2 × 3 = 6**

28. ದೇವನೂರ ಮಹಾದೇವ

29. ಕುಮಾರವ್ಯಾಸ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ : 1 × 3 = 3**

30. ಏನು ಹೇಳ್ವೆ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

https://byjus.com

BYJU'S The Learning App



**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

31. "ಭೀಮ ದುರ್ಯೋಧನರು ಮದಗಜಗಳಂತೆ ಹೋರಾಡಿದರು."

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ : 1 × 3 = 3**

32. ಮಾತೇ ಮುತ್ತು, ಮಾತೇ ಮೃತ್ಯು.

**ಅಥವಾ**

ಕೂಡಿ ಬಾಳಿದರೆ ಸ್ವರ್ಗಸುಖ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 6 × 3 = 18**

33. "ತಾಯಿ, ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ ?"

34. "ನಾನು ಮುಖ ಮೇಲಾಗಿ ಬಿದ್ದಿದ್ದೆನೆ ?"

35. "ಹುಸಿಯದ ಬೇಹಾರಿಯೇ ಇಲ್ಲ."

36. "ಪ್ರೀತಿಯ ಹಣತೆಯ ಹಚ್ಚೋಣ."

37. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"

38. "ಹಸುರತ್ತಲ್, ಹಸುರಿತ್ತಲ್ , ಹಸುರೆತ್ತಲ್"

https://byjus.com

BYJU'S The Learning App



**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ :** **1 × 4 = 4**

39. ನೀಲಮೇಘಮಂಡಲ ..................................................................

..............................................................................................

..............................................................................................

..............................................................................................

ಹಕ್ಕಿ ಹಾರುತಿದೆ ನೋಡಿದಿರಾ ?

**ಅಥವಾ**

ಯುಗ-ಯುಗಗಳ ..........................................................................

..............................................................................................

..............................................................................................

..............................................................................................

ಹಕ್ಕಿ ಹಾರುತಿದೆ ನೋಡಿದಿರಾ ?

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ :** **1 × 4 = 4**

40. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ ।
ನೊರ್ವನೇ ವೀರನಾತನ ಯಜ್ಞತುರಗಮಿದು ।
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ॥
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ ।
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ ।
ಗುರ್ವತೋಳ್ಗಳಿವೇತಕೆಂದು ಸಳೆ ವಾಸಿಯಂ ತೊಟ್ಟು ಲವನುರಿದೆದ್ದನು ॥

https://byjus.com

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :** **2 × 4 = 8**

41. ಮುದುಕಿಯು ತನ್ನ ಮಗನು ಯುದ್ಧಕ್ಕೆ ಹೋದ ಸಂದರ್ಭವನ್ನು ಹೇಗೆ ವಿವರಿಸಿದಳು ?

**ಅಥವಾ**

ರಾಹಿಲನು ಮುದುಕಿಯ ಕುಟುಂಬಕ್ಕೂ, ಮುದುಕಿಯು ರಾಹಿಲನಿಗೂ ಮಾಡಿದ ಸಹಾಯವನ್ನು ಸಂಕ್ಷಿಪ್ತವಾಗಿ ವಿವರಿಸಿ.

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :**

**1 × 4 = 4 ( 2 + 2 )**

ಸ್ವಾತಂತ್ರ್ಯ ನಂತರ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ಭಾರತ ಕೂಡ ಸಹಿ ಹಾಕಿದ್ದರ ಪರಿಣಾಮ ಹಲವಾರು ಶಾಂತಿಪಾಲನಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಬೇಕಾಗಿ ಬಂತು. ಕೊರಿಯಾ, ಸೈಪ್ರಸ್, ಕಾಂಗೋ, ಜೈರ್, ಉಗಾಂಡಾ – ಹೀಗೆ ಹಲವು ರಾಷ್ಟ್ರಗಳಲ್ಲಿ ಭಾರತೀಯ ಸೈನಿಕರು ವಿಶ್ವಸಂಸ್ಥೆಯ ಭಾಗವಾಗಿ ಕೆಲಸ ಮಾಡಿದರು. ೧೯೬೧ ರ ಡಿಸೆಂಬರ್ ಕಾಂಗೋ ಕಾರ್ಯಾಚರಣೆಯಲ್ಲಿ ಗೂರ್ಖಾ ರೈಫಲ್ಸ್‌ನ ಕ್ಯಾಪ್ಟನ್ ಗುರುಬಚ್ಚನ್ ಸಿಂಗ್ ಸಲಾರಿಯಾ ಕಟಾಂಗದ ಎಲಿಜಬೆತ್ ವಿಲ್ಲೆಯಲ್ಲಿ ಕೇವಲ ಬಯೊನೆಟ್, ಕುಕ್ರಿ ಮತ್ತು ಗ್ರೆನೇಡ್‌ಗಳನ್ನು ಬಳಸಿ ೪೦ ವೈರಿ ಸೈನಿಕರನ್ನು ಹಾಗೂ ಅವರ ಎರಡು ವಾಹನಗಳನ್ನು ನಾಶ ಮಾಡಿ ವಿಶ್ವಸಂಸ್ಥೆಯ ಕಛೇರಿಗೆ ಬಂದಿದ್ದ ಅಪಾಯವನ್ನು ತಮ್ಮ ಪ್ರಾಣಾರ್ಪಣೆ ಮಾಡಿ ತಡೆದರು. ಈ ಮೂಲಕ ಭಾರತೀಯ ಯೋಧರ ಕರ್ತವ್ಯ ನಿಷ್ಠೆಯನ್ನು ಜಗತ್ತಿಗೆ ಸಾರಿ, ವಿದೇಶಿ ನೆಲದಲ್ಲಿ ಮರಣೋತ್ತರ ಪರಮವೀರಚಕ್ರ ಪ್ರಶಸ್ತಿ ಗಳಿಸಿದ ಮೊದಲಿಗರಾದರು.

BYJU'S The Learning App
https://byjus.com

ಸ್ವಾತಂತ್ರ್ಯ ನಂತರ ಭಾರತ ೧೯೬೫, ೧೯೭೧ ರಲ್ಲಿ ಪಾಕಿಸ್ತಾನದೊಡನೆ ಮತ್ತು ೧೯೬೨ ರಲ್ಲಿ ಚೀನಾದೊಡನೆ ಮೂರು ಯುದ್ಧಗಳಲ್ಲಿ ಭಾಗವಹಿಸಿತ್ತು. ಅಲ್ಲದೆ ಸಿಯಾಚಿನ್ ಪ್ರದೇಶದ ವಶಕ್ಕಾಗಿ ಆಪರೇಷನ್ ಮೇಘನಾದ್ (೧೯೮೪), ಕಾರ್ಗಿಲ್ ಕಾರ್ಯಾಚರಣೆಗೆ ಆಪರೇಷನ್ ವಿಜಯ (೧೯೯೯) ಇತ್ಯಾದಿ ಗಡಿ ತಂಟೆ ಹೋರಾಟಗಳನ್ನು ಎದುರಿಸಿತ್ತು.

43. ಪ್ರಶ್ನೆಗಳು :

ಅ) ವಿಶ್ವಸಂಸ್ಥೆಯ ಕಛೇರಿಗೆ ಬಂದಿದ್ದ ಅಪಾಯವನ್ನು ಕ್ಯಾಪ್ಟನ್ ಗುರುಬಚ್ಚನ್ ಸಿಂಗ್ ಹೇಗೆ ತಡೆದರು ?

ಬ) ಸ್ವಾತಂತ್ರ್ಯ ನಂತರ ಭಾರತೀಯ ಸೇನೆ ಸಾಧಿಸಿದ ವಿಜಯಗಳನ್ನು ಪಟ್ಟಿ ಮಾಡಿ ಬರೆಯಿರಿ.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ :**

**1 × 5 = 5**

44. ನಿಮ್ಮನ್ನು ಕೊಡಗಿನ ಸರ್ಕಾರಿ ಪ್ರೌಢಶಾಲೆಯ 'ಅಂಜಲಿ' ಎಂದು ಭಾವಿಸಿಕೊಂಡು, ವರ್ಗಾವಣೆ ಪತ್ರ ಹಾಗೂ ಅಂಕಪಟ್ಟಿಯನ್ನು ನೀಡುವಂತೆ ಕೋರಿ, ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಉಡುಪಿಯ ಸರ್ಕಾರಿ ಪ್ರೌಢಶಾಲೆಯ 'ರಮೇಶ್' ಎಂದು ಭಾವಿಸಿಕೊಂಡು, ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ಅನುಮತಿ ಹಾಗೂ 3,000 ರೂ.ಗಳನ್ನು ಕಳುಹಿಸಿ ಕೊಡುವಂತೆ ಕೋರಿ, ಶಿವಮೊಗ್ಗದ ಕುವೆಂಪುನಗರದಲ್ಲಿ ವಾಸವಾಗಿರುವ 'ಬಸವರಾಜಪ್ಪ' ಎಂಬ ಹೆಸರಿನ ನಿಮ್ಮ ತಂದೆಯವರಿಗೆ ಪತ್ರವನ್ನು ಬರೆಯಿರಿ.

https://byjus.com

BYJU'S The Learning App



V. ಕೆಳಗಿನ ಯಾವುದಾದರೂ ಒಂದು ವಿಷಯಕ್ಕೆ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ : 1 × 5 = 5

45. ರಾಷ್ಟ್ರೀಯ ಹಬ್ಬಗಳ ಮಹತ್ವ

**ಅಥವಾ**

ಅಕ್ಷರ ದಾಸೋಹ ಮತ್ತು ಕ್ಷೀರ ಭಾಗ್ಯಗಳ ಸಾಮಾಜಿಕ ಮಹತ್ವ

https://byjus.com